ಪ್ರಾರಂಭಿಸಿದೆ. ಮುಖ್ಯ ಕವಿಗಳ ಕೃತಿಗಳನ್ನು ನನ್ನ ಹಾಸಿಗೆಯ ಪಕ್ಕದ ಮೇಜಿನ ಮೇಲೆಯೇ ಬೇಕಾದಾಗ ಎತ್ತಿಕೊಳ್ಳುವಂತೆ ಇಟ್ಟೆ. ಈ ಪ್ರಪಂಚವನ್ನು ತಿಳಿಯುವುದಕ್ಕೆ ನನಗಿದು ಬೇಕಿದೆ. ಇದು ನನಗೆ ಭಾಷೆಯು ಈ ಪ್ರಪಂಚದ ನಿಜಗಳಿಂದ ಮತ್ತು ರೂಢಿಗತ ಅಭ್ಯಾಸಗಳಿಂದ ತನ್ನನ್ನು ತಾನೇ ಮುಕ್ತಗೊಳಿಸಿಕೊಂಡದ್ದನ್ನು ತಿಳಿಯುವುದಕ್ಕೆ ಬೇಕು. ಇದು ನನಗೆ ವಾಸ್ತವವನ್ನು ವ್ಯವಸ್ಥೆಗೊಳಿಸುವುದಕ್ಕೆ ಮತ್ತು ಆದೇಶಿಸುವುದಕ್ಕೆ ಬೇಕಿದೆ. ನಾನು ನಿರ್ದಿಷ್ಟವಾಗಿ ಹುಡುಕುತ್ತಿದ್ದುದು ಇದನ್ನೇ. ಇದುವೇ ನನ್ನ ಒಳಗಿನ ಮನಸ್ಸು, ಲಯ ಮತ್ತು ಪ್ರಕೃತಿಯಾಗಿದೆ.

**◆ ನೀವು ಮೊದಲು ಕವಿತೆ ಬರೆಯಲು ಆರಂಭಿಸಿದ್ದು ಹೇಗೆ ? ನಿಮ್ಮನ್ನು ಕವಿಯಾಗಲು ಪ್ರೇರೇಪಿಸಿದ ನಿರ್ದಿಷ್ಟ ಕ್ಷಣ ಅಥವಾ ಘಟನೆಗಳೇನಾದರೂ ಇವೆಯೇ?**

ಈಗಾಗಲೇ ನಾನು ಹೇಳಿದಂತೆ, ಕಾವ್ಯ ನನ್ನೊಳಗೆ ಜನಿಸಿದ್ದು. ಅದೊಂದು ಕನಸಿನಿಂದ ಹುಟ್ಟಿದ್ದು. ನಿದ್ದೆ ಮತ್ತು ಎಚ್ಚರಗಳ ನಡುವಿನಲ್ಲಿ, ಹೃದಯ ಸುಟ್ಟ ರಾತ್ರಿಗಳಲ್ಲಿ ಹುಟ್ಟಿದ್ದು. ಕೆಲವು ಪದಗಳು ಯಾವುದೋ ಅನಾಮಿಕ ಧ್ವನಿಯಿಂದ ಎದ್ದು ಬಂದವು ಅನಿಸುತ್ತದೆ.

**◆ ಇಟಲಿಯ ಹೊಸ ತಲೆಮಾರಿನ ಕಾವ್ಯದ ವಸ್ತು- ವಿಷಯ, ನಿರೂಪಣಾ ಕ್ರಮ ಹಾಗೂ ಆಶೋತ್ತರಗಳೇನು ?**

ನನ್ನ ಪ್ರಕಾರ 80 ಮತ್ತು 90ರ ದಶಕಗಳಲ್ಲಿ ಇಟಲಿಯಲ್ಲಿ ನನ್ನಂತೆಯೇ ಜನಿಸಿದ ಹೊಸ ತಲೆಮಾರಿನ ಕವಿಗಳ ರೂಪಕ ಶಕ್ತಿಯು ಹೊಸತನದಾಗಿದ್ದು, ಉತ್ತಮ ಗುಣಮಟ್ಟವನ್ನು ಪಡೆದಿದೆ. ನಮ್ಮ ಕಾಲದ ಕಾವ್ಯಭಾಷೆ ಮತ್ತದರ ಸೂಕ್ಷ್ಮತೆಗಳು, ಅದರ ಕಣ್ಕಟ್ಟು, ವೈಫಲ್ಯಗಳ ಬಗ್ಗೆ ಗಮನ ಸೆಳೆಯುತ್ತದೆ. ಆದರೆ ನನಗನಿಸುವಂತೆ ಇತರ ಅನೇಕ ಕಲಾ ಪ್ರಕಾರಗಳನ್ನೂ ಒಳಗೊಂಡಂತೆ, ಬಹುಶಃ ಒಂದು ಮಹಾಕಾವ್ಯದ ಹುಡುಕಾಟದ ಕಡೆಗಿನ ಅಖಂಡ ಪ್ರಜ್ಞೆ ಮತ್ತು ತುಡಿತವನ್ನು ಕಳೆದುಕೊಂಡಿದೆ. ನನ್ನ ಪ್ರಕಾರ ಇದು ಜಗದೊಳಗೆ ಅಡಗಿರುವ, ಇನ್ನೊಂದು ಜಗತ್ತನ್ನು ಮರಳಿ ನಿರೂಪಿಸುವ, ವಾಸ್ತವಕ್ಕೆ ಪ್ರತಿವಾಸ್ತವವನ್ನು ಕಥಿಸುವ ಮತ್ತು ಹೊಸ ಲ್ಯಾಂಡ್ ಸ್ಕೇಪುಗಳನ್ನು ಸೃಷ್ಟಿಸುವ, ಸುಪ್ತ ಮನಸ್ಸಿನ ಕಲಾನುಭವಗಳ ಹಿಂಜರಿಕೆಯ ಪ್ರಯತ್ನವನ್ನು ಬಿಟ್ಟುಕೊಟ್ಟಿದೆ. ಇದು ಸಾಂಸ್ಕೃತಿಕ ಮತ್ತು ರಾಜಕೀಯ ಉಲ್ಲೇಖಗಳಿಗಿಂತ, ದೌರ್ಬಲ್ಯ ಮತ್ತು ಅಸ್ತಿತ್ವಹೀನ ಅಂಗೀಕಾರದ ನಿರರ್ಗಳ ಸಂಕೇತವೆಂದು ನನಗೆ ತೋರುತ್ತದೆ. ನಮ್ಮ ಹೊಸ ಪೀಳಿಗೆಯ ಕಾವ್ಯ ಕಳೆದುಹೋದವರ ಭಾಷೆಯನ್ನು, ಹೋರಾಡಲೇ ಬೇಕಾದ ನಿಜವಾದ ಯುದ್ಧ ಯಾವುದೆಂದು ಅರಿವಿಲ್ಲದವರ ಭಾಷೆಯನ್ನು ಮಾತನಾಡುತ್ತದೆ. ಬಾಳಿ ಬದುಕುವ ಸಾಹಸ, ಭೂಮಿಯ ಮೇಲಿನ ನಮ್ಮೆಲ್ಲರ ಜೀವನವನ್ನು ಒಗ್ಗೂಡಿಸುವ Universal destinyಯ ಪ್ರತಿನಿಧಿಯಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ದಿಗ್ಭ್ರಮೆ ಮತ್ತು ಛಿದ್ರ ತುಣುಕುಗಳ ಕಾವ್ಯ ನಮ್ಮ ಪೀಳಿಗೆಯದ್ದು.

**◆ 21ನೇ ಶತಮಾನವನ್ನು 'ಗದ್ಯಯುಗ' ಅಂತ ವ್ಯಾಖ್ಯಾನಿಸಲಾಗುತ್ತದೆ. ನಿಮ್ಮಲ್ಲಿ ಕವಿತೆಗೆ ಹೊಸತಲೆಮಾರಿನ ಓದುಗರು ಸ್ಪಂದಿಸುತ್ತಿದ್ದಾರೆ ಅನಿಸುತ್ತಾ?**

ಇಟಲಿಯಲ್ಲಿ ಕಾವ್ಯದ ಆಟ ಮತ್ತೆ ಹೊಸ ಹುರುಪಿನೊಂದಿಗೆ ಶುರುವಾಗಿದೆ. ರೂಪಕಗಳ ಬೆನ್ನು ಹತ್ತುವ ಮತ್ತು ಅವುಗಳನ್ನು ಗಂಭೀರವಾಗಿ ಶೋಧಿಸುವ ಪ್ರವೃತ್ತಿ ಆರಂಭವಾಗಿದೆ ಅಂತ ಹೇಳೋದಕ್ಕೆ ಖುಷಿಯಾಗುತ್ತೆ. ಪುಸ್ತಕ ಮಾರುಕಟ್ಟೆಯ ಅಂಕಿ-ಅಂಶಗಳು ಮೊದಲ ನೋಟಕ್ಕೆ ಇದನ್ನು ಅಲ್ಲಗಳೆದರೂ ಕೂಡ, ಸಾಮಾಜಿಕ ಜಾಲತಾಣಗಳ ಮೂಲಕ ಪದ್ಯಗಳ ವಿನಿಮಯ, ಪ್ರಸಾರ ಮತ್ತು ಪ್ರಚಾರ ನಡೆಯುತ್ತಿರುವುದನ್ನು ಒಪ್ಪಿಕೊಳ್ಳಲೇ ಬೇಕು. ಈ ಡಿಜಿಟಲ್ ಮಾಧ್ಯಮಗಳ ಮೂಲಕ ಹಲವು ಒಳ್ಳೆಯ ಕವಿಗಳು ಜನರಿಗೆ ಕಾವ್ಯವನ್ನು ತಲುಪಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಮತ್ತಿದು ಈ ಅಳವಿನಂಚಿನಲ್ಲಿರುವ ಕಾವ್ಯ ಕಲೆಯ ಕಡೆಗೆ ಸೂಕ್ಷ್ಮ ದೃಷ್ಟಿಕೋನವನ್ನು ಪ್ರೇರೇಪಿಸುವುದರೊಂದಿಗೆ, ತಕ್ಷಣದ ಬೇಡಿಕೆಯನ್ನು, ಅಷ್ಟೇ ನಾಜೂಕಾಗಿ, ಮುಕ್ತವಾಗಿ ಮತ್ತು ಎಲ್ಲಿಲ್ಲದ ತೀವ್ರತೆಯೊಂದಿಗೆ ಹೆಚ್ಚಿಸುತ್ತಿದೆ.

**◆ ಒಬ್ಬ ಕವಿಯಾಗಿ ಪ್ರೇಮ, ಲೈಂಗಿಕತೆ ಮತ್ತು ದಾಂಪತ್ಯವನ್ನು ನಿತ್ಯ ಬದುಕಿನಲ್ಲಿ ಯಾವ ರೀತಿ ವಿಂಗಡಿಸಿಕೊಳ್ಳುತ್ತೀರಿ? ಹೊಸ ತಲೆಮಾರು ಇದನ್ನು ಹೇಗೆ ನಿಭಾಯಿಸುತ್ತಿದೆ?**